ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು – 570017
ದೂರವಾಣಿ ಸಂಖ್ಯೆ: 0821–2343384

CHAMUNDESHWARI ELECTRICITY
SUPPLY CORPORATION LIMITED
(Government of Karnataka undertaking)
Corporate Office,
CESC, Mysuru-570017
Website: www.cescmysore.org
E-mail ID: agmtax@cescmysore.org

Company Identity Number[CIN]:- **U40109KA2004SGCO35177**

ಕ್ರಮಾಂಕ: ಸೆಸ್ಕ್/ತೆರಿಗೆ/02/01/2021-22/ Cys-10
ಲಗತ್ತು: 1 ಪ್ರತಿ.

ದಿನಾಂಕ: 05 APR 2022

ಗೆ,
ಮುಖ್ಯ ಇಂಜಿನಿಯರ್(ವಿ) ವಲಯ ಕಛೇರಿ, ಮೈಸೂರು/ಹಾಸನ,
ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ,
ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ,
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಂನಿ) ನಿಗಮ ಕಛೇರಿ,
ಚಾವಿಸನಿನಿ, ಮೈಸೂರು.

ಮಾನ್ಯರೇ,

**ವಿಷಯ:**-ಆರ್ಥಿಕ ವರ್ಷ 2021-22ನೇ ಸಾಲಿನ ಮಾಹೆವಾರು ನೀಡಿರುವ ಮಾಹಿತಿಗಳಲ್ಲಿನ ನ್ಯೂನ್ಯತೆ ಹಾಗೂ ನೀಡಿರುವ GSTIN ನೋಂದಣಿ ಸಂಖ್ಯೆಗಳು ರದ್ದಾಗಿರುವ ಬಗ್ಗೆ.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆರ್ಥಿಕ ವರ್ಷ 2021-22ರ ಮಾಹೆವಾರು ಮಾಹಿತಿಗಳನ್ನು ಹೊಸದಾಗಿ ನೇಮಕಗೊಂಡಿರುವ ನಿಗಮದ ತೆರಿಗೆ ಸಲಹೆಗಾರರಾದ ಎಸ್ ತಲ್ವಾರ್ ಅಂಡ್ ಅಸೋಸಿಯೇಟ್ಸ್ ರವರು ನಿಗಮದಲ್ಲಿ ನಿರ್ವಹಿಸಲಾಗುತ್ತಿರುವ ಮಾಹಿತಿಗಳನ್ನು ಪರಿಶೀಲಿಸಿ, ನ್ಯೂನ್ಯತೆಗಳನ್ನು ಈ ಕೆಳಕಂಡಂತೆ ಸರಿಪಡಿಸಿಕೊಳ್ಳಲು ತಿಳಿಸಿರುತ್ತಾರೆ.

1) ಒಳಪೂರೈಕೆಗೆ ಸಂಬಂಧಿಸಿದಂತೆ Nil Rated/ Exempted ಮತ್ತು ಇತರೆ ವಿವರಗಳನ್ನು ಹಾಗೂ ನೋಂದಾಯಿತರಲ್ಲದ ಸರಬರಾಜು/ಸೇವಾದಾರರ ಮಾಹಿತಿಗಳನ್ನು ಈವರೆಗೆ ನಮೂದಿಸದೇ ಇರುವುದು ಕಂಡಬಂದಿದ್ದು, ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಅನುಬಂಧದಲ್ಲಿ ನಮೂದಿಸತಕ್ಕದ್ದು.
2) TTK, DCW ಮತ್ತು TC Repair ಮಾಹಿತಿಗಳನ್ನು TTK Contract & Project ಅನುಬಂಧಗಳಲ್ಲಿ ಪ್ರತ್ಯೇಕವಾಗಿ ನಮೂದಿಸತಕ್ಕದ್ದು.
3) ಮಾಹೆವಾರು ಹುಂಡಿ ಮಾಹಿತಿಗಳ ಸಲ್ಲಿಕೆ ಸಂದರ್ಭದಲ್ಲಿ ದಿನಾಂಕದ ಕಾಲಂನಲ್ಲಿ ದಿನಾಂಕವನ್ನು ನೀಡಿರುವ ಮಾದರಿಯಲ್ಲಿ ನಮೂದಿಸುವುದು. (ಉದಾ: DD.MM.YYYY ಎಂದು ನಮೂದಿಸುವುದು)
4) ಪಾವತಿಗಾಗಿ ಸಲ್ಲಿಸಿರುವ ಹುಂಡಿಗಳನ್ನು ಪಾಸು ಮಾಡುವ ಮೊದಲು ಹುಂಡಿ ಸಂಖ್ಯೆ, GSTIN ಸಂಖ್ಯೆ ಮತ್ತು ಸಂಬಂಧಪಟ್ಟ ಇತರೆ ವಿವರಗಳನ್ನು ಪರಿಶೀಲಿಸುವುದು ಹಾಗೂ ಪರಿಶೀಲಿಸಲಾದ ಮಾಹಿತಿಗಳಲ್ಲಿ ಏನಾದರೂ ಲೋಪದೋಷ ಕಂಡುಬಂದಲ್ಲಿ, ಸರಿಯಿರುವ ಪರಿಷ್ಕೃತ ಹುಂಡಿಗಳನ್ನು ಪಡೆದು, ನಂತರ ಪಾವತಿಗೆ ಕ್ರಮಕ್ಕೈಗೊಳ್ಳುವುದು.
5) TDS & TCS ಪಾವತಿಗೆ ಸಂಬಂಧಿಸಿದಂತೆ ಪ್ರತ್ಯೇಕ ನಿಧಿ ಕೋರಿಕೆಯನ್ನು ಸಲ್ಲಿಸಿ, ನಿಗಧಿತ ಸಮಯದೊಳಗೆ ಪಾವತಿ ಮಾಡಲು ಕ್ರಮಜರುಗಿಸತಕ್ಕದ್ದು.

ಹಾಗೂ ಲೆಕ್ಕಘಟಕಗಳಿಂದ ಸಲ್ಲಿಸಲಾಗಿರುವ ಮಾಹೆವಾರು ಮಾಹಿತಿಗಳನ್ನು ಜಿ.ಎಸ್.ಟಿ ಅಂತರ್ಜಾಲದ ತಾಣದಲ್ಲಿ ಪರಿಶೀಲಿಸಿದಾಗ, ಕೆಲವು GSTIN ಸಂಖ್ಯೆಗಳು ಸ್ವ-ಇಚ್ಛೆಯಿಂದ ರದ್ದಾಗಿರುವುದು ಬಿಂಬಿತವಾಗಿರುತ್ತದೆ.(ಪ್ರತಿಗಳನ್ನು ಲಗತ್ತಿಸಿದೆ)

ಆದರೆ ಸದರಿ ಗುತ್ತಿಗೆದಾರರು GSTIN ಸಂಖ್ಯೆಯನ್ನು ರದ್ದುಗೊಳಿಸಿದ ನಂತರವು Tax Invoice ಅನ್ನು ತಯಾರಿಸಿ ನೀಡಿದ್ದು, ವಿಭಾಗೀಯ ಮಟ್ಟದಲ್ಲೂ ಸಹ ಇದನ್ನು ಪರಿಶೀಲಿಸದೇ ಗುತ್ತಿಗೆದಾರರಿಗೆ ತೆರಿಗೆ ಪಾವತಿ ಮಾಡಲಾಗಿರುತ್ತದೆ. ಆದರೆ, GST ಕಾಯ್ದೆಯ ಅನುಸಾರ GSTIN ಸಂಖ್ಯೆಯನ್ನು ರದ್ದುಗೊಳಿಸಿದ ನಂತರ ಯಾವುದೇ ಕಾರಣಕ್ಕೂ Tax Invoice ನೀಡಲು ಸಾಧ್ಯವಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಗುತ್ತಿಗೆದಾರರು ಈ ಹಿಂದೆ ಪಡೆದಿರುವ ಎಲ್ಲಾ ಬಿಲ್ಲುಗಳಿಗೆ GSTR-3B ಫೈಲಿಂಗ್ ಮಾಡಿದ ವಿವರವನ್ನು ಲೆಕ್ಕ ಘಟಕಕ್ಕೆ ಸಲ್ಲಿಸಿರುವುದನ್ನು ಖಚಿತಪಡಿಸಿಕೊಂಡು ಹಾಗೂ ಸ್ವ-ಇಚ್ಛೆಯಿಂದ (Suo-moto) ರದ್ದುಗೊಂಡಿರುವ ನಂತರದ ದಿನಾಂಕದಿಂದ ಪ್ರಸ್ತುತದವರೆಗೆ ಗುತ್ತಿಗೆದಾರರಿಗೆ ಪಾವತಿಸಿರುವ ಜಿ.ಎಸ್.ಟಿ ಮೊತ್ತವನ್ನು ಮುಂದಿನ ಬಿಲ್ ಪಾವತಿ ಮಾಡುವ ಸಂದರ್ಭದಲ್ಲಿ ಕಡಿತಗೊಳಿಸಿ ಉಳಿಕೆ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಲು ನಿಗಮದ ನಿಯಮಾನುಸಾರ ಕ್ರಮವಹಿಸುವುದು ಮತ್ತು ಮುಂದಿನ ದಿನಗಳಲ್ಲಿ ಇಂತಹಃ ಗುತ್ತಿಗೆದಾರರು ಜಿ.ಎಸ್.ಟಿ ಹುಂಡಿ ತಯಾರಿಸಿ ಸಲ್ಲಿಸದಂತೆ ಸದರಿಯವರಿಗೆ ಸೂಚನಾ ಪತ್ರ ನೀಡುವುದು.

ಮುಂದುವರೆದು, ಮೇಲ್ಕಂಡ ವಿಷಯಗಳು ಶಾಸನಬದ್ಧ ವಿಚಾರವಾದ್ದರಿಂದ ಮುಂದಿನ ದಿನಗಳಲ್ಲಿ ಖರೀದಿ / ಸೇವೆಗಳ ಆದೇಶ ನೀಡುವ ಮುನ್ನ GSTIN ಸಂಖ್ಯೆಯನ್ನು ಸಕ್ಷಮ ಪ್ರಾಧಿಕಾರದ ವೆಬ್‌ಸೈಟ್ gst.govt.in ರಲ್ಲಿ Login ಆಗಿ, Dealers Search ನಲ್ಲಿ ಪರಿಶೀಲಿಸಿ GSTIN ನಂಬರ್ ಚಾಲ್ತಿ ಇರುವ ಬಗ್ಗೆ ಖಚಿತಪಡಿಸಿಕೊಂಡ ನಂತರವೇ ನಿಗಮದ ನಿಯಮಾನುಸಾರ ಕ್ರಮಕೈಗೊಳ್ಳಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಮುಖ್ಯ ಆರ್ಥಿಕ ಅಧಿಕಾರಿ.

ಪ್ರತಿಗಳು:-

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ, ನಿಗಮ ಕಛೇರಿ ಮೈಸೂರು, ರವರ ಮಾಹಿತಿಗಾಗಿ.
- ಪ್ರಧಾನ ವ್ಯವಸ್ಥಾಪಕರು(ಖರೀದಿ), ನಿಗಮ ಕಛೇರಿ ಮೈಸೂರು, ರವರ ಮಾಹಿತಿಗಾಗಿ.
- ನಿಯಂತ್ರಣಾಧಿಕಾರಿಗಳು ವಲಯ ಕಛೇರಿ, ಮೈಸೂರು/ಹಾಸನ, ರವರ ಮಾಹಿತಿಗಾಗಿ.
- ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು ಕಾ ಮತ್ತು ಪಾ ವೃತ್ತ ಕಛೇರಿಗಳು, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು (ಎಮ್.ಐ.ಎಸ್), ನಿಗಮದ ಅಧಿಕೃತ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.
- ಆಪ್ತ ಕಾರ್ಯದರ್ಶಿ, ವ್ಯನಿ/ನಿ(ತಾಂ)/ಮುಆಅ.
- ಎಲ್ಲಾ ಲೆಕ್ಕಾಧಿಕಾರಿಗಳು (ಆಂ ಪ) ಕಾ ಮತ್ತು ಪಾ, ವಿಭಾಗಗಳು/ವೃತ್ತಗಳು, ಚಾವಿಸನಿನಿ.
- ಮು.ಕ.